ದಿನಾಂಕಃ 03-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಿಂದ,

1) ನಿಶಾನೆ ಪಿ-01 ವಂಶವೃಕ್ಷವನ್ನು ಪ್ರತಿವಾದಿ 1 ರವರು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ವಾದ ಪತ್ರವನ್ನು ತಯಾರು ಮಾಡಲು 1 ನೇ ಪ್ರತಿವಾದಿ ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 5 ಕಡೆ ಇರುತ್ತವೆ. ದಾವಾ ಸ್ವತ್ತಿನ ಪಹಣಿ ಪತ್ರಿಕೆಗಳು ನನ್ನ ಸಹೋದರನ ಹೆಸರಿನಲ್ಲಿ ಇರುತ್ತವೆ. ನನ್ನ ತಂದೆ ಮೂಲತಹ ಅಕ್ಕಿ ಹೇಬ್ಬಾಳು ಗ್ರಾಮದವರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ಕಂದಾಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

2) ಪ್ರತಿವಾದಿ 1 ಮತ್ತು ಮೋಹನ ಕುಮಾರ್ ಹೆಸರಿಗೆ ಪ್ರತ್ಯೇಕವಾಗಿ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಪ್ರತಿವಾದಿ 1 ರವರು ಅನೋನ್ಯವಾಗಿರುತ್ತವೆ ಎಂದರೆ ಎಲ್ಲರೂ ಚೆನ್ನಾಗಿ ಇರುತ್ತೇವೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಗಂಡ ಸುಮಾರು 5 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಪ್ರತಿವಾದಿ 1 ಮತ್ತು ಮೋಹನ ಕುಮಾರ್ ರವರು ಪ್ರತ್ಯೇಕವಾಗಿ ಸ್ವಾಧೀನ ಇದ್ದರು ಎಂದರೆ ಸರಿ. ಪ್ರತಿವಾದಿ ಹೆಸರಿನಲ್ಲಿ ಖಾತೆ ಇರುವ ವಿಷಯ ನನಗೆ ಗೊತ್ತಿರುತ್ತದೆ. ಸರ್ವೇ ನಂ.102/3 ರಲ್ಲಿ 4 ಗುಂಟೆ ವಿಸ್ತೀರ್ಣ ಸರ್ಕಾರ ಭೂಸ್ವಾಧೀನ ಪಡಿಸಿಕೊಂಡಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

3) ದಿನಾಂಕ 15.09.2014 ರಂದು ಸರ್ವೇ ನಂ. 102/3 ರಲ್ಲಿ 1 ಎಕರೆ 8 ಗುಂಟೆ ಆಸ್ತಿಯನ್ನು ವೀರೂಪಾಕ್ಷ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಒಟ್ಟು ಕುಟುಂಬದ ಪರವಾಗಿ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಬಸವನಹಳ್ಳಿ ಗ್ರಾಮದಲ್ಲಿ ಯಾವುದೇ ಆಸ್ತಿ ಇರುವುದಿಲ್ಲ. ನನ್ನ ತಾಯಿ ತೀರಿಕೊಂಡ ನಂತರ ಪ್ರತಿವಾದಿ 1 ಮತ್ತು ಮೋಹನ ಕುಮಾರ್ ರವರು ಪ್ರತ್ಯೇಕವಾಗಿ ಭಾಗ

ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರವರು ಆಸ್ತಿಯನ್ನು ಅಡಮಾನ ಮಾಡಿ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ